# ಮಣಿಸಾಲು

**ಸಾಹಿತ್ಯದ** ಹೆಸರಿನಲ್ಲಿ ಮತಾಂಧರು ಕವಿಗಳೆಂದು ಕರೆಸಿಕೊಂಡಿದ್ದಾರೆ. ರೋಗಗ್ರಸ್ತವಾದ ಮತೀಯ ವಾತಾವರಣದಿಂದ ಪಾರಾಗದಿದ್ದರೆ ಕನ್ನಡ ಸಾಹಿತ್ಯ ದೊಡ್ಡದಾಗುವುದಿಲ್ಲ, ನವ್ಯೋನವವಾಗುವುದಿಲ್ಲ, ನಮಗೂ ಉಳಿಗತಿಯಿಲ್ಲ. ಸರ್ವೋದಯ, ಸಮನ್ವಯ, ಪೂರ್ವದೃಷ್ಟಿಗಳನ್ನು ಧ್ಯೇಯವಾಗಿಸಿಕೊಂಡು ವಿಶ್ವಮಾನವನ ಸೃಷ್ಟಿಗೆ ಕಾರಣವಾಗುವ ಸಾಹಿತ್ಯಕ್ಕೆ ಮಾತ್ರ ಭವಿಷ್ಯವಿದೆ. ಮುಂದಿನ ಸಾಹಿತ್ಯ ಆ ದಿಸೆಯಲ್ಲಿ ನಡೆದರೆ ಮಾತ್ರ ಸರ್ವಮಾನ್ಯವಾಗುತ್ತದೆ. ಇಲ್ಲದಿದ್ದರೆ ಲೊಳಲೊಟ್ಟೆಯಾಗುತ್ತದೆ.

**–ಕುವೆಂಪು**

**ನಮಗೆ** ಪಂಪ ಹೇಗೆ ಸಿಕ್ಕಿದ್ದಾನೆ ಎಂದರೆ, ಕಳೆದ ಸಾವಿರ ವರ್ಷದಿಂದ ಅವನನ್ನು ಊದಿ ತೂರಿ ಇಪ್ಪತ್ತೊಂದನೇ ಶತಮಾನದವರೆಗೂ ಕಳಿಸಿದ್ರಿಂದ, ಪಂಪ ಸಿಕ್ಕಿದ್ದಾನೆ. ಇಲ್ಲಿತನಕ ಊದಿ ತೂರಿ ಕಳಿಸಿರುವುದರಿಂದ ಅಲ್ಲಮ ಸಿಕ್ಕಿದ್ದಾನೆ. ಅದು ನಮ್ಮಲ್ಲಿ ನಡೆದುಕೊಂಡು ಬಂದಿರುವ ಸಂಪ್ರದಾಯ. ಈಗ ನಮ್ಮದೇನು ಕರ್ತವ್ಯ ಎಂದರೆ, ಊದಿ ತೂರಿ ಕಳಿಸಿ ಮುಂದೆ ಹೋಗ್ತಾ ಇರೋದು. ಆ ಪ್ರಯಾಣಕ್ಕೆ ಕೊನೆಯೇ ಇಲ್ಲ...

**–ಕಿ.ರಂ. ನಾಗರಾಜ**

**ನಮ್ಮ** ಸುತ್ತಲಿನ ಜೀವಿಗಳ ಬದುಕಿಗೆ ಸ್ಪಂದಿಸುತ್ತಾ ನಮ್ಮ ಬದುಕು ಸಾಗಬೇಕು. ಹಾಗೆ ಸ್ಪಂದಿಸದಿದ್ದರೆ ನಾವು ಬದುಕಿದಂತೆಯೇ ಅಲ್ಲ. ನನ್ನ ಜೀವನದ ಆಗುಹೋಗುಗಳನ್ನು ನೆನೆದರೆ ಸಾಕು, ಉಪಕಾರ ಭಾವ ನನ್ನನ್ನು ಆವರಿಸಿಬಿಡುತ್ತದೆ. ಹಿಂದಿನವರು ತಮ್ಮ ವಿಚಾರಗಳನ್ನು, ವಿದ್ವತ್ತನ್ನು, ಸೃಜನಶೀಲತೆಯ ಫಲವನ್ನು, ಮುಖ್ಯತಃ ಅನುಭವಗಳನ್ನು ನನಗೆ ಕೊಡದೇ ಹೋಗಿದ್ದರೆ, ನಾನು ಎಷ್ಟೊಂದು ಅಂಶಗಳಿಗೆ ಎರವಾಗುತ್ತಿದ್ದೆ! ಆ ಋಣವನ್ನು ನನ್ನ ಬರಹದಿಂದ, ಪ್ರಾಮಾಣಿಕ ನಡವಳಿಕೆಯಿಂದ ಮತ್ತು ಜನಜೀವನದಲ್ಲಿ ಪಾಲ್ಗೊಳ್ಳುವಿಕೆಯಿಂದ ತೀರಿಸಲು ಪ್ರಯತ್ನಿಸಬೇಕು ಎಂದು ನನಗೆ ಸದಾಕಾಲ ಅನಿಸುತ್ತದೆ.

**–ಶಿವರಾಮ ಕಾರಂತ**

**ನಮ್ಮ** ರಾಜಕೀಯ, ಸಾಮಾಜಿಕ ಜೀವನ ಕುಲಗೆಟ್ಟು ಹೋಗಿರುವುದು ಕೋಮುವಾದದ ಭೂತಸ್ಥಾಪನೆಯಿಂದ. ಈ ಬೀದಿಯ ಮಾರಿಯನ್ನು ಮನೆಗೆ ಬರಮಾಡಿಕೊಳ್ಳುವುದು ಸಾಹಿತಿಗೆ ಭೂಷಣವಲ್ಲ; ಜನಾಂಗಕ್ಕೆ ಶ್ರೇಯಸ್ಕರವಲ್ಲ. ಉತ್ತಮ ಸಾಹಿತ್ಯ ಉತ್ತಮ ರಾಷ್ಟ್ರವನ್ನು ಬೆಳೆಸುವುದಕ್ಕೆ ಹೇತುವೆಂದು ನಂಬುವವರು ಇಂತಹ ವಿಷವಾಹಿನಿಗಳನ್ನು ತಡೆಗಟ್ಟಬೇಕು. ಕಲುಷಿತವಾಗಿರುವ ನಮ್ಮ ಸಾಮಾಜಿಕ ಜೀವನ ಮತ್ತಷ್ಟು ಕಲುಷಿತವಾಗಿ ಶಸ್ತ್ರಚಿಕಿತ್ಸೆಗೆ ಒದಗದಂತೆ ಎಚ್ಚರವಾಗಿರಬೇಕು.

**–ಅನಕೃ**

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68